**ಮೈಸೂರಿನ ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**

**<u>ಎಸ್.ಸಿ.ಸಂಖ್ಯೆ.252/2025</u>**

| | |
|---|---|
| **ಫಿರ್ಯಾದುದಾರರು** : | ರಾಜ್ಯ ಸರ್ಕಾರದ ಪರವಾಗಿ ಇಲವಾಲ ಪೊಲೀಸ್ ಪೊಲೀಸ್ ಠಾಣೆ |
| | :: **ವಿರುದ್ಧ** :: |
| **ಆರೋಪಿ** | ರವಿ ಕೆ. |

**<u>:ದೋಷರೋಪಣೆ:</u>**

ನಾನು **ಶ್ರೀ ಮಲ್ಲನಗೌಡ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,** ಮೈಸೂರು, ಈ ಕೆಳಕಂಡ ಆರೋಪಿಯಾದ :-

ರವಿ. ಕೆ,
ಬಿನ್ ಕೃಷ್ಣೆಗೌಡ,
ವಯಸ್ಸು 42 ವರ್ಷ,
ವಾಸಃ ಆನಂದೂರು ಗ್ರಾಮ,
ಇಲವಾಲ ಹೋಬಳಿ,
ಮೈಸೂರು ತಾಲ್ಲೂಕು.

ನಿಮ್ಮ ಮೇಲೆ ಹೊರಿಸುವ **ದೋಷಾರೋಪಣೆ** ಏನೆಂದರೆಃ

ಮೈಸೂರು ತಾಲ್ಲೂಕು, ಇಲವಾಲ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಆನಂದೂರು ಗ್ರಾಮದಲ್ಲಿ ವಾಸವಾಗಿರುವ ಚಾಸಾ.3 ಕೃಷ್ಣೇಗೌಡ ರವರಿಗೆ ಸರ್ವೆ ನಂ.13 ರಲ್ಲಿ 2 ಎಕರೆ 28 ಗುಂಟೆ ಹಾಗೂ 148 ರಲ್ಲಿ 1 ಎಕರೆ 14 ಗುಂಟೆ ಪಿರ್ತಾರ್ಜಿತ ಜಮೀನು ಇದ್ದು, ಆ ಜಮೀನನ್ನು ಚಾಸಾ.3 ರವರು ತನ್ನ ಇಬ್ಬರು ಮಕ್ಕಳಾದ ಆರೋಪಿಯಾದ ನಿಮಗೆ ಹಾಗೂ ಮೃತ ಮಹೇಶ ಎಂಬುವರಿಗೂ

ಸಮಾನವಾಗಿ ಹಂಚಿಕೆ ಮಾಡಲಾಗಿದ್ದು ಇಬ್ಬರೂ ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು. ಈ ಜಮೀನುಗಳ ಜೊತೆಗೆ ಚಾಸಾ.3 ರವರ ಹೆಸರಿನಲ್ಲಿ ಶ್ರೀರಂಗಪಟ್ಟಣ ತಾಲೂಕು ಬೆಳಗೊಳ ಎಲ್ಲೆಗೆ ಸೇರಿದ ಸರ್ವೆ ನಂಬರ್ 1025/3 ರಲ್ಲಿ, 9 ಗುಂಟೆ ಪಿತ್ರಾರ್ಜಿತ ಆಸ್ತಿ ಹಾಗೂ ಸರ್ವೆ ನಂಬರ್ 1025/4 ರಲ್ಲಿ 6 ½ ಗುಂಟೆ ಸ್ವಯಾರ್ಜಿತ ಆಸ್ತಿ ಇದ್ದು, ಈ ಪೈಕಿ ಬೆಳಗೊಳ ಸರ್ವೆ ನಂಬರ್ 1025/4 ರಲ್ಲಿರುವ 6½ ಗುಂಟೆ ಜಮೀನನ್ನು ಸಾಕ್ಷಿ-3 ರವರು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿಕೊಂಡಿರುತ್ತಾರೆ.

ದಿನಾಂಕ: 01.09.2025 ಕ್ಕೆ ಒಂದು ವರ್ಷದ ಹಿಂದೆ ಚಾಸಾ.3 ರವರಿಗೆ ಪಾರ್ಶ್ವವಾಯು ಆಗಿದ್ದರಿಂದ ಅವರ ಹಿರಿಯ ಮಗ ಮೃತ ಮಹೇಶ ಮತ್ತು ಆತನ ಮನೆಯವರು ಚಾಸಾ.3 ರವರಿಗೆ ಚಿಕಿತ್ಸೆ ಕೊಡಿಸಿ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು, ಇದರಿಂದ ಚಾಸಾ.3 ರವರು ತಾನು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ್ದ ಬೆಳಗೊಳ ಎಲ್ಲೆಗೆ ಸೇರಿದ ಸರ್ವೆ ನಂಬರ್ 1025/4 ರಲ್ಲಿರುವ 6 ½ ಗುಂಟೆ ಜಮೀನನ್ನು ದಿನಾಂಕ: 20.05.2025 ರಂದು ಮೃತ ಮಹೇಶ ರವರ ಹೆಸರಿಗೆ ದಾನವಾಗಿ ಬರೆದುಕೊಟ್ಟಿರುತ್ತಾರೆ, ಈ ವಿಚಾರ ಆರೋಪಿಯಾದ ನಿಮಗೆ ತಿಳಿದ ನಂತರ ಮೃತ ಮಹೇಶ ಮತ್ತು ಚಾಸಾ.2 ಹಾಗೂ ಚಾಸಾ.3 ರವರ ಮೇಲೆ ದ್ವೇಷ ಸಾಧಿಸುತ್ತಾ ಬಂದಿರುತ್ತೀರಿ.

ದಿನಾಂಕ: 01.09.2025 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ.3 ರವರು ಆನಂದೂರು ಗ್ರಾಮದಲ್ಲಿರುವ ತನ್ನ ಮನೆಯಲ್ಲಿದ್ದಾಗ ಆರೋಪಿಯಾದ ನೀವು ಚಾಸಾ.3 ರವರ ಮನೆಯ ಒಳಗೆ ಹೋಗಿ 62 ಗುಂಟೆ ಜಮೀನನ್ನು ಮಹೇಶನಿಗೆ ಯಾಕೆ ಬರೆದುಕೊಟ್ಟಿದ್ದೀಯಾ ಎಂದು ಕೇಳಿದಾಗ ಚಾಸಾ.3 ರವರು ಆ ಜಮೀನು ತನ್ನ ಸ್ವಂತ ಜಮೀನು ತನಗೆ ಸ್ಟ್ರೋಕ್ ಹೊಡೆದಾಗ ಮೃತ ಮಹೇಶನೇ ತನ್ನ ಯೋಗಕ್ಷೇಮವನ್ನು ನೋಡಿಕೊಂಡಿದ್ದರಿಂದ ಅವನಿಗೆ ಬರೆದುಕೊಟ್ಟಿದ್ದೀನಿ ಉಳಿಕೆ ಜಮೀನಿನಲ್ಲಿ ನಿನಗೂ ಕೂಡ ಭಾಗ ಬರುತ್ತದೆ ಎಂದು ಹೇಳಿದ್ದರಿಂದ ಸದರಿ ನೀವು ಕೋಪಗೊಂಡು ನಿಮ್ಮ ಕೈಯಿಂದ ಚಾಸಾ.3 ರವರ ಮುಖಕ್ಕೆ ಗುದ್ದಿ ನಂತರ ಕಾಲಿನಿಂದ ಚಾಸಾ.3 ರವರ ಎದೆಗೆ ಒದ್ದು ಸಾಮಾನ್ಯ

ಸ್ವರೂಪದ ನೋವುಂಟು ಮಾಡಿರುತ್ತೀರಿ, **ಆ ಕಾರಣದಿಂದ ಆರೋಪಿಯಾದ ನೀವು ಬಿ.ಎನ್.ಎಸ್.115(2)ರ** ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

**ಎರಡನೇಯದಾಗಿ**, ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಕಬ್ಬಿಣದ ಮಚ್ಚನ್ನು ಉಲ್ಟಾ ಹಿಡಿದುಕೊಂಡು ಚಾಸಾ.3 ರವರ ಬಲಮೊಣಕಾಲಿಗೆ ಹೊಡೆದಿರುತ್ತೀರಿ. ಸದರಿ ದಿನ ಮದ್ಯಾಹ್ನ 12.15 ಗಂಟೆ ಸಮಯದಲ್ಲಿ, ಆನಂದೂರು ಎಲ್ಲೆಗೆ ಸೇರಿದ ಸರ್ವೆ ನಂಬರ್ 13 ರಲ್ಲಿರುವ ಕೊಟ್ಟಿಗೆ ಮನೆ ಬಳಿಗೆ ಹೋಗಿ ತನ್ನ ಸ್ಕೂಟರ್ ಅನ್ನು ಕೊಟ್ಟಿಗೆಯ ಮುಂಭಾಗದಲ್ಲಿ ನಿಲ್ಲಿಸಿ ಸ್ಕೂಟರ್ ನಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಕೊಟ್ಟಿಗೆಯ ಬಳಿಗೆ ಹೋದಾಗ ಚಾಸಾ.2 ಲಕ್ಷ್ಮಿ @ ಭಾಗ್ಯಲಕ್ಷ್ಮಿ ರವರು ಯಾಕಪ್ಪಾ ಇಲ್ಲಿಗೆ ಬಂದಿದ್ದೀಯಾ ಎಂದು ಕೇಳಿದ ತಕ್ಷಣ ಆರೋಪಿಯಾದ ನೀವು ಏಕಾಏಕಿಯಾಗಿ ನಿಮ್ಮ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ.2 ರವರ ತಲೆಯ ಎಡಭಾಗಕ್ಕೆ ಹೊಡೆದಿರುತ್ತೀರಿ. ನಂತರ ಅದೇ ಮಚ್ಚಿನಿಂದ ಕೊಟ್ಟಿಗೆ ಒಳಗೆ ಇದ್ದ ಮಹೇಶ ರವರ ಎಡಭಾಗದ ಕೆನ್ನೆಗೆ ಹೊಡೆದು ತೀವ್ರ ಸ್ವರೂಪದ ನೋವುಂಟು ಮಾಡಿರುತ್ತೀರಿ, **ಆ ಕಾರಣದಿಂದ ಆರೋಪಿಯಾದ ನೀವು ಬಿ.ಎನ್.ಎಸ್.118(1) ಮತ್ತು 118(2)ರ** ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

**ಮೂರನೇಯದಾಗಿ**, ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಮಹೇಶ ರವರಿಗೆ ಹೊಡೆದಾಗ ಅವರು ಅಂಗಾತವಾಗಿ ಕೆಳಕ್ಕೆ ಬಿದ್ದು ಹೋದ ನಂತರ ಅವರ ತಲೆಯ ಎಡಭಾಗದಲ್ಲಿ ಕುಳಿತುಕೊಂಡು ಮಹೇಶನ ಹಣೆಯ ನೇರದಲ್ಲಿ ಅದೇ ಮಚ್ಚಿನಿಂದ 3 ಬಾರಿ ತಲೆಯನ್ನು ಕತ್ತರಿಸಿ ಎರಡು ಹೋಳಾಗಿ ಮಾಡಿ ಮಹೇಶ ರವರ ಹತ್ಯೆಗೆ ಮಾಡಿರುತ್ತೀರಿ, **ಆ ಕಾರಣದಿಂದ ಆರೋಪಿಯಾದ ನೀವು ಬಿ.ಎನ್.ಎಸ್.109 ರ** ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

**ಕೊನೇಯದಾಗಿ**, ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಮಹೇಶ ರವರಿಗೆ ಹೊಡೆದಾಗ ಅವರು ಅಂಗಾತವಾಗಿ ಕೆಳಕ್ಕೆ ಬಿದ್ದು ಹೋದ ನಂತರ ಅವರ ತಲೆಯ ಎಡಭಾಗದಲ್ಲಿ ಕುಳಿತುಕೊಂಡು ಮಹೇಶನ ಹಣೆಯ ನೇರದಲ್ಲಿ ಅದೇ ಮಚ್ಚಿನಿಂದ 3 ಬಾರಿ ತಲೆಯನ್ನು ಕತ್ತರಿಸಿ ಎರಡು ಹೋಳಾಗಿ ಮಾಡಿದ್ದರಿಂದ ಮಹೇಶ ರವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ, **ಆ ಕಾರಣದಿಂದ ಆರೋಪಿಯಾದ ನೀವು ಬಿ.ಎನ್.ಎಸ್.103(1)ರ** ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪದಡಿ ಆರೋಪಿಯಾದ ನೀವು ನನ್ನಿಂದ ಈ ದಿನ ದಿನಾಂಕ 17.02.2026 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಮಲ್ಲನಗೌಡ)**
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.

# ಮೈಸೂರಿನ ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಎಸ್.ಸಿ.ಸಂಖ್ಯೆ.252/2025

**ಫಿರ್ಯಾದುದಾರರು** ರಾಜ್ಯ ಸರ್ಕಾರದ ಪರವಾಗಿ ಇಲವಾಲ ಪೊಲೀಸ್ ಠಾಣೆ

::**ವಿರುದ್ಧ** ::

**ಆರೋಪಿ** ರವಿ ಕೆ.

## ಆರೋಪಿಯ ಹೇಳಿಕೆ

ಪ್ರಶ್ನೆ - 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ -

ಪ್ರಶ್ನೆ-2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ -

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 17.02.2026 ರಂದು ದೃಢೀಕರಿಸುತ್ತೇನೆ)

**(ಮಲ್ಲನಗೌಡ)**
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.